> ವಿರಾಜ ಎಷ್ಟೇ ಪ್ರಯತ್ನಿಸಿದರೂ ನಮ್ಮ ನಡುವೆ ಗಂಡ ಹೆಂಡತಿಯ ಸಂಬಂಧ ಬೆಳೆಸಲು ಅವನಿಂದ ಸಾಧ್ಯವಾಗಲೇ ಇಲ್ಲ. ನಾಟಿ, ಆಯುರ್ವೇದ, ಅಲೋಪತಿ ನಮಗೆ ತಿಳಿದ ಮದ್ದನ್ನೆಲ್ಲಾ ಪ್ರಯತ್ನಿಸಿಯಾಗಿತ್ತು. ಫಲಿತಾಂಶ ಮಾತ್ರ ಸೊನ್ನೆ. ಅವನ ನೋವು ನನಗರ್ಥವಾಗುತ್ತಿತ್ತು. ಆದರೆ ಅವನಿಗೆ ನಾನು ಅರ್ಥವಾಗಲೇ ಇಲ್ಲ.



ಒರಟಾಗುತ್ತಿದ್ದ. ವಿಕ್ರಮನ ಮಾತಿಗೊಪ್ಪಿದ್ದೇನೆಂದು ಅಲ್ಲದಿದ್ದರೂ ಸಿಗರೇಟಿನ ದೊಂದಿಯಿಂದ ಮೈ ಸುಡಿಸಿಕೊಂಡಾಗ ಆದ ಕಲೆಯನ್ನು ಮುಚ್ಚಲು ರುಕ್ಮಿಣಿ ಹೈನೆಕ್ ಬ್ಲೌಸ್, ತುಂಬು ತೋಳಿರುವ ಬಟ್ಟೆ ಧರಿಸಲು ಪ್ರಾರಂಭಿಸಿದರೆ ವಿಕ್ರಂ ತನ್ನ ಪೌರುಷಕ್ಕೆ ತಾನೇ ಮಾರು ಹೋದ! ಆದರೆ ಆ ಬಟ್ಟೆಯಲ್ಲಿರುತ್ತಿದ್ದ ರುಕ್ಮಿಣಿ ಬೇರೆಯದೇ ವ್ಯಕ್ತಿತ್ವದವಳಾದಳು. ದಿನ ದಿನವೂ ರುಕ್ಮಿಣಿ ಬೇರೆಯಾಗುತ್ತಲೇ ಹೋದಳು, ವಿಕ್ರಮನಿಂದ ದೂರವಾಗುತ್ತಲೇ ಹೋದಳು.

ಗುರುತು ಪರಿಚಯವಿರದ ರಿಸೆಪ್ಷನಿಸ್ಟ್ ರೋಸಿಯನ್ನು ಕಂಡು ರುಕ್ಮಿಣಿಯನ್ನೇಕೆ ಇಂದು ಇಷ್ಟೊಂದು ನೆನೆಯುತ್ತಿದ್ದೇನೆ ಎಂದು ವಿಕ್ರಂ ತನ್ನ ಯೋಚನೆಗೆ ತಾನೇ ಅವಾಕ್ಕಾದ.

'ಉಸ್ಸಪ್ಪಾ... ಯಾವ ಒತ್ತಡವನ್ನಾದರೂ ಸಹಿಸಿಯೇನು. ಆದರೆ ಇದನೆಲ್ಲಾ ತಡೆಯಲಿಕ್ಕಾಗದು' ಎಂದು ಮೂತ್ರ ಚೀಲ ಖಾಲಿಯಾಗುತ್ತಲೇ ಕೈ ತೊಳೆದು ಕತ್ತರಿಯನ್ನು ರಿಸೆಪ್ಷನಿಸ್ಟ್ ರೋಸಿ ಕೈಯಲ್ಲಿ ಹಿಡಿಸಿ ಥ್ಯಾಂಕ್ಸ್ ಎನ್ನುತ್ತ ವೇದಿಕೆಯತ್ತ ಧಾವಿಸಿದ ವಿಕ್ರಂ.

ಅದಾಗಲೇ ರಾಘವ್ ತನ್ನ ಮಾತು ಮುಗಿಸಿ ಭರ್ಜರಿ ಚಪ್ಪಾಳೆ ಗಳಿಸಿಕೊಂಡು ಗತ್ತಿನಲ್ಲಿ ಕುಳಿತಿದ್ದ. ತನ್ನೊಳಗಿನ ಒತ್ತಡ ನೀಗಿಸಿಕೊಂಡು ಬಂದಿದ್ದ ವಿಕ್ರಂ ನಿನ್ನ ಡೌಲು–ದೌಲತ್ತು ನನಗೆ ಸವಾಲಲ್ಲವೆಂಬಂತೆ ರಾಘವನತ್ತ ನೋಡಿ ನಕ್ಕು ಮೈಕನ್ನು ಹಿಡಿದ. 'ಬೇರೆಯವರ ಅನುಭವದ ಮೂಸೆಯಲ್ಲಿ ತನ್ನ ತಿಕವಿಟ್ಟು ಸುಂದರ ಮುಖವಾಗುತ್ತಿಲ್ಲ ಎಂದು ಕೊರಗಿದರೆ ಏನು ಬಂತು! ಬೇರೆಯವರ ಅನುಭವವನ್ನು ಕಣ್ಣುಮುಚ್ಚಿ ಅನುಸರಿಸುವುದಕ್ಕಿಂತ ನಮ್ಮ ಪರಿಸ್ಥಿತಿಗೆ ತಕ್ಕಂತೆ...' ಎಂದು ಹೇಳಬೇಕಾದುದನ್ನು ಬಿಟ್ಟು ಇನ್ನೂ ಏನೇನೋ ಹಲುಬತೊಡಗುತ್ತಲೇ ಬಾಯಲ್ಲಿ ಬುರುಗುಡುವ ನೊರೆ ಬಂದು ಎಲುಬಿಲ್ಲದ ನಾಲಿಗೆ ಸೊಟ್ಟಗಾಗಿ ಎದೆ ಹಿಡಿದು ಕುಸಿದುಬಿದ್ದ ವಿಕ್ರಂ.

★★★

ಸಭೆಯಲ್ಲಿದ್ದವರೆಲ್ಲರೂ ವಿಕ್ರಮನ ಸುತ್ತ ಗುಂಪಾಗುತ್ತಲೇ ಎಲ್ಲರನ್ನೂ ಶಾಂತವಾಗಿಸಿ, ಗಾಳಿಯಾಡಲಿ ಎಂದು ಎಲ್ಲರನ್ನೂ ದೂರ ಸರಿಸಿ, ಧೈರ್ಯ ಹೇಳಿ ತಕ್ಷಣ ವಿಕ್ರಮನನ್ನು ಆಸ್ಪತ್ರೆಗೆ ಸಾಗಿಸಿದವ ಗುಪ್ತಾ.

ಟೆಕ್ನೋಮಾರ್ಕ್ ಕಂಪನಿಯ ಎಲ್ಲಾ ವ್ಯವಹಾರವನ್ನು ವಿಕ್ರಂ ವಹಿಸಿಕೊಂಡಾಗಿನಿಂದಲೂ ಗುಪ್ತಾ ಅವನ ಪಿಎ ಮಾತ್ರವಲ್ಲ ವಿಕ್ರಮನ ಆಪ್ತನೂ ಕೂಡ. ಸಕ್ಕರೆ ಕಾಯಿಲೆಯ ಮಾತ್ರೆಯ ಜೊತೆ ಒಂದಿಷ್ಟು ಸಾಂತ್ವನವನ್ನೂ ಕೊಡುತ್ತಿದ್ದವ. ರುಕ್ಮಿಣಿ ವಿಕ್ರಮನನ್ನು ವಸ್ತುವಿನಂತೆ ಕಾಣಲಾರಂಭಿಸಿದ ಮೇಲೆ ಇಮೋಷನಲ್ ಡಿಪೆಂಡೆನ್ಸಿಗೆ ಮತ್ಯಾರ ಮೊರೆಯನ್ನೂ ಹೋಗದೆ ಗುಪ್ತಾನನ್ನೇ ನೆಚ್ಚಿದ್ದ ವಿಕ್ರಂ.

ವಿಕ್ರಮನನ್ನು ಹಾಸ್ಪಿಟಲ್‌ಗೆ ಭರ್ತಿ ಮಾಡಿದ್ದೇ ಗುಪ್ತಾ ರುಕ್ಮಿಣಿಗೆ ವಿಷಯವನ್ನು ತಿಳಿಸಲು ಕುಟ ಕುಟನೆ ನಂಬರ್ ಒತ್ತಿದ, 'ವ್ಹಾಟ್ ಅ ಬ್ಲಡಿ ಮೈ ಮೈಂಡ್ ಈಸ್, ಐ ಕೆನಾಟ್ ಈವನ್ ಫಾರ್ಗೆಟ್ ಹರ್ ನಂಬರ್' ಎಂದು ನಾಲಿಗೆ ಕಚ್ಚಿಕೊಳ್ಳುತ್ತಲೇ ಅತ್ತಲಿನ ದನಿ ಫೋನಿನಲ್ಲಿ ಉಲಿಯಿತು,